(ಇಂದು ದಿನಾಂಕ:25-09-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಎದುರುದಾರ ನಂ.3 ರವರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಆರ್.14 | ತನಿಖಾ ವರದಿಯನ್ನು ತಕರಾರಿಗೊಳಪಟ್ಟು |

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ.**

1. ನಾನು ರಿಲಾಯನ್ಸ್ ಕಂಪನಿಯ ಖಾಸಗಿ ತನಿಖೆ ಮಾಡುವ ಬಗ್ಗೆ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ಪೋ.ಠಾಣೆಗೆ ಹೋಗಿ ಅಲ್ಲಿ ಎಲ್ಲ ದಾಖಲೆಗಳನ್ನು ಸಂಗ್ರಹಿಸಿ ರಿಲಾಯನ್ಸ್ ಕಂಪನಿಯ ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ನಾನು ಠಾಣೆಗೆ ಭೇಟಿ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಠಾಣೆಯಲ್ಲಿ ಒಂದು ದಾಖಲೆಯನ್ನು ಪಡೆಯಬೇಕಾದರೆ, ದಾಖಲೆ ಪಡೆಯುವ ಪೂರ್ವದಲ್ಲಿ ಬ್ಯಾಂಕ್ ಚಲನ್ ತುಂಬಿ ನಿಗದಿತ ಮೊತ್ತ ಭರಿಸಿದ ನಂತರ ದಾಖಲೆಯನ್ನು ನೀಡಲಾಗುತ್ತದೆ ಎಂದರೆ ಸರಿ. ಆದರೆ ಈ ಪ್ರಕರಣದಲ್ಲಿ ನಾನು ದಾಖಲೆ ಪಡೆಯುವ ಪೂರ್ವದಲ್ಲಿ ಬ್ಯಾಂಕ್ ಚಲನ್ ತುಂಬಿ ನಿಗದಿತ ಮೊತ್ತ ಭರಿಸಿ ದಾಖಲೆ ಪಡೆದಿಲ್ಲ.
2. ನಾನು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟ ಕ್ರಿಮಿನಲ್ ಪ್ರಕರಣ ಸಂಖ್ಯೆ 700/2023 ನೇದ್ದರಲ್ಲಿಯ ತನಿಖಾಧಿಕಾರಿಗಳ ಹೇಳಿಕೆಯನ್ನು ನಾನು ದಾಖಲಿಸಿಲ್ಲ. ಸದರಿ ಪ್ರಕರಣದ ದೋ. ಪ.ದಲ್ಲಿ ಎಷ್ಟು ಸಾಕ್ಷಿದಾರರನ್ನಾಗಿ ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರಕರಣದಲ್ಲಿ ಒಟ್ಟು ನಾಲ್ಕು ಜನ ಪ್ರತ್ಯಕ್ಷ ಸಾಕ್ಷಿದಾರರು ಇರುತ್ತಾರೆ. ಅವರೆಂದರೆ ಕರಡೋಣಾ ಗ್ರಾಮದ ದುರ್ಗಮ್ಮ, ಶಾಮಮ್ಮ

ಮತ್ತು ಇನ್ನೂ ಇಬ್ಬರ ಹೆಸರು ನನಗೆ ಗೊತ್ತಿಲ್ಲ. ಅಪಘಾತ ನಡೆದ ಸ್ಥಳ ಉಮಳಿ ಕಾಟಾಪೂರ. ಉಮಳಿ ಕಾಟಾಪೂರ ಗ್ರಾಮ ಕರಡೋಣಾ ಗ್ರಾಮದಿಂದ 4 ಕಿಮಿ ಅಂತರದಲ್ಲಿದೆ. ದುರ್ಗಮ್ಮ ಮತ್ತು ಶಾವಮ್ಮ ಅಪಘಾತವಾದ ದಿನ ಮನೆಯಲ್ಲಿ ಇದ್ದರು. ದುರ್ಗಮ್ಮ ಮತ್ತು ಶಾವಮ್ಮ ರವರು ಪ್ರತ್ಯಕ್ಷ ಸಾಕ್ಷಿದಾರರು ಎಂದರೆ ಸರಿ. ದುರ್ಗಮ್ಮ ಮತ್ತು ಶಾವಮ್ಮ ರವರ ದೋ.ಪ.ದಲ್ಲಿನ ಹೇಳಿಕೆಗಳನ್ನು ನಾನು ಓದಿಲ್ಲ. ಕರಡೋಣಾ ಗ್ರಾಮದ ದುರ್ಗಮ್ಮ, ಶಾಮಮ್ಮ ರವರು ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರು ಅಲ್ಲ ಎಂದರೆ ಸರಿ. ಕರಡೋಣಾ ಗ್ರಾಮದ ದುರ್ಗಮ್ಮ, ಶಾಮಮ್ಮ  ರವರು ಪ್ರತ್ಯಕ್ಷ ಸಾಕ್ಷಿದಾರರು ಅಂತಾ ನಾನು ದೋ. ಪ. ನೋಡಿ ಹೇಳುತ್ತಿದ್ದೇನೆ.

2. ಅಪಘಾತವು ರಾತ್ರಿ 8-00 ಗಂಟೆ ನಂತರ ಆಗಿರುತ್ತದೆ ಎಂದರೆ ಸರಿ. ಅಪಘಾತವಾದ ನಂತರ ಘಟನಾ ಸ್ಥಳದಲ್ಲಿ ಇದ್ದ ಪ್ರತ್ಯಕ್ಷ ಸಾಕ್ಷಿದಾರರರ ಹೇಳಿಕೆಯನ್ನು ನೋಡಿಲ್ಲ. ಕರಡೋಣಾ ಗ್ರಾಮದ ದುರ್ಗಮ್ಮ, ಶಾಮಮ್ಮ ರವರ ಹೇಳಿಕೆಯನ್ನು ಪಡೆಯುವ ಪೂರ್ವದಲ್ಲಿ ನಾನು ಲಿಖಿತವಾಗಿ ಒಪ್ಪಿಗೆ ಪಡೆದಿಲ್ಲ ಆದರೆ ಮೌಖಿಜವಾಗಿ ಪಡೆದಿರುತ್ತೇನೆ. ದುರ್ಗಮ್ಮ, ಶಾಮಮ್ಮ ರವರ ಹೇಳಿಕೆಯನ್ನು ಪಡೆದಿದ್ದೇನೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ 1 +17 ಮೊಬೈಲ್ ಸಾಧನದಿಂದ ದುರ್ಗಮ್ಮ, ಶಾಮಮ್ಮ ರವರ ಹೇಳಿಕೆಯನ್ನು ಪಡೆದಿದ್ದೇನೆ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ದುರ್ಗಮ್ಮ, ಶಾಮಮ್ಮ ರವರ ಹೇಳಿಕೆಯನ್ನು ಪಡೆಯುವ ರವರು ಅನಕ್ಷರಸ್ಥರು ಅವರು ಶಾಲೆ ಕಲಿತಿಲ್ಲ. ನಾನು ದೂರುದಾರರ ಹೇಳಿಕೆಯನ್ನು ದಾಖಲಿಸಿಲ್ಲ ಏಕೆಂದರೆ ಅವರು ಊರಲ್ಲಿ ಇಲ್ಲ. ನಾನು ಸ್ಥಳ ಪಂಚನಾಮೆ ಮಾಡಿದ ಪಂಚರ ಹೇಳಿಕೆ ದಾಖಲಿಸಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ದುರ್ಗಮ್ಮ, ಶಾಮಮ್ಮ ರವರ ಹೇಳಿಕೆಯಂತೆ ಆ ದಿನ ಎದುರದಾರ ನಂ.1 ವಾಹನದ ಚಾಲಕರಾಗಿರಲಿಲ್ಲ ಮತ್ತು ವಿರುಪಾಕ್ಷಿ ವಾಹನದ ಚಾಲಕನಾಗಿದ್ದೇನೆ ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದುರ್ಗಮ್ಮ, ಶಾಮಮ್ಮ ರವರ ಹೇಳಿಕೆ ಹೊರತುಪಡಿಸಿ ನಾನು ಸ್ವತಂತ್ರವಾಗಿ ವೈಜ್ಞಾನಿಕವಾಗಿ

ತನಿಖೆ ಮಾಡಿಲ್ಲ. ನಾನು ರಿಲಾಯನ್ಸ್ ಕಂಪನಿ ಅಡಿಯಲ್ಲಿ ಕೆಲಸ ಮಾಡುತ್ತಿದ್ದರಿಂದ ಸುಳ್ಳು ತನಿಖಾ ವರದಿಯನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು